# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 55ನೇ ತಾಂತ್ರಿಕ ಸಮಿತಿ ಸಭೆಯ ನಡಾವಳಿಗಳು, ಯೋಜನಾ ಇಲಾಖೆಯ ಸಭಾ ಕೊಠಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು 09 ಜೂನ್ 2022 ರಂದು ಬೆಳಿಗ್ಗೆ 11:00

**ಸಂ. ಕೆಇಎ 12 ಇವಿಎನ್ 2022** **13ನೇ ಜೂನ್ 2022**

ಪ್ರಾರಂಭದಲ್ಲಿ, ನಿರ್ದೇಶಕರು (ಮೌಲ್ಯಮಾಪನ), ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ರವರು, ತಾಂತ್ರಿಕ ಸಮಿತಿ ಅಧ್ಯಕ್ಷರಾದ – ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆರವರನ್ನು, ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ರವರನ್ನು, ತಾಂತ್ರಿಕ ಸಮಿತಿಯ ಪರಿಣಿತ ಸದಸ್ಯರನ್ನು ಹಾಗೂ ವಿವಿಧ ಇಲಾಖೆ ಪ್ರತಿನಿಧಿಗಳನ್ನು ಆಹ್ವಾನಿಸಿದರು.

ಸಭೆಯಲ್ಲಿ ಚರ್ಚಿಸಲಾದ ಅಜೆಂಡಾ ಅಂಶಗಳ ಮೇಲಿನ ನಡಾವಳಿಗಳ ದಾಖಲೆಗಳು ಇಂತಿವೆ.

**ವಿವಿಧ ಮೌಲ್ಯಮಾಪನಾ ಅಧ್ಯಯನಗಳ ಉಲ್ಲೇಖಿತ ನಿಯಮ(TOR)ಗಳನ್ನು ಸಭೆಯಲ್ಲಿ ಮಂಡಿಸಲಾಗಿ, ಈ ಕೆಳಕಂಡ ಸಲಹೆಗಳನ್ನು ನೀಡಲಾಗಿ, ಇವುಗಳನ್ನು ಒಂದು ವಾರದೊಳಗೆ ಪರಿಷ್ಕರಿಸಿಲಾಗುವುದೆಂದು ತಿಳಿಸಲಾಯಿತು.**

| **ಕಾರ್ಯಸೂಚಿ 1.** | **'ಸಮಗ್ರ ಶಿಕ್ಷಣ' ಕರ್ನಾಟಕ ಯೋಜನೆಯ ವಿವಿಧ ಕಾರ್ಯಕ್ರಮಗಳ / ಚಟುವಟಿಕೆಗಲ ಅನುಷ್ಠಾನ ಪರಿಣಾಮದ ಬಗ್ಗೆ ಮೌಲ್ಯಮಾಪನ** | **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ** |
|---|---|---|
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಹೆಚ್ಚುವರಿ ಅನುದಾನ ಲಭ್ಯತೆ ಕುರಿತು ಪರಿಶೀಲಿಸುವುದು. ಕ್ರಿಯಾಯೋಜನೆಯ ಅನ್ವಯ ತ್ವರಿತ ಕ್ರಮ ಕೈಗೊಳ್ಳುವ ಬಗ್ಗೆ ಮತ್ತು ಹೇಗೆ ಉತ್ತಮ ಆರ್ಥಿಕ ಸಾಧನೆ ಮಾಡುವ ಬಗ್ಗೆ?<br>2. ಮಂಡಿಸಿದ ಅಂಕಿ–ಅಂಶಗಳಲ್ಲಿ ಅಧ್ಯಾಪಕರ ಸಂಬಳಕ್ಕೆ ಮೀಸಲಾದ ಅನುದಾನ ಕುರಿತು ಮತ್ತೊಮ್ಮೆ ಪರಿಶೀಲಿಸುವುದು ಮತ್ತು ಸದರಿ ಅಂಶವನ್ನು ಸರಿಪಡಿಸಲು | |

| | |
|---|---|
| | ಕ್ರಮ, ಏಕೆಂದರೆ ಈ ಅನುದಾನವು ಪೂರ್ಣ ಅನುದಾನದಲ್ಲಿ ಹೆಚ್ಚು ಭಾಗ ಒಳಗೊಂಡಿದ್ದು, ಉಳಿದ ಘಟಕಗಳಿಗೆ ಕಡಿಮೆ ಅನುದಾನ ಲಭ್ಯವಾಗುವ ಬಗ್ಗೆ.<br>3. ಈ ಕೆಳಕಂಡ ಪ್ರಮುಖ ಮೌಲ್ಯಮಾಪನ ಅಧ್ಯಯನ ಸೇರ್ಪಡಿಸುವುದು.<br>ಅ) ರಾಜ್ಯದ ಕಲಿಕೆಯ ಪರಿಣಾಮವನ್ನು ಹೇಗೆ ಹೆಚ್ಚಿಸುವುದು? ಈ ನಿಟ್ಟಿನಲ್ಲಿ ಸಾಧಿಸಲು ಸಹಾಯಕಾರಿಯಾಗುವ ಕೀಲಕ ಅಂಶಗಳನ್ನು ಗುರುತಿಸುವುದು ಮತ್ತು ಸಾಧಿಸಲು ಪೂರಕವಾಗಿರುವ ಈ ಎಲ್ಲಾ ಅಂಶಗಳನ್ನು ರಾಜ್ಯದಲ್ಲಿ ಕುಂಠಿತ ಪ್ರಗತಿ ಸಾಧಿಸಿರುವ ಜಿಲ್ಲೆ/ತಾಲ್ಲೂಕುಗಳಲ್ಲಿ ಪ್ರನರಾವರ್ತಿಸುವುದು. ರಾಜ್ಯದಲ್ಲಿ ಆಂಗ್ಲ, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಕುಂಠಿತ / ಕಡಿಮೆ ಫಲಿತಾಂಶವಿದ್ದು, ರಾಜ್ಯದ ಯಾವ ಜಿಲ್ಲೆಯಲ್ಲಿ / ಪಂಗಡ / ವರ್ಗಗಳಲ್ಲಿ ಈ ರೀತಿ ಕಡಿಮೆ ಫಲಿತಾಂಶವಿರುವ ಬಗ್ಗೆ ಮತ್ತು ಇದಕ್ಕೆ ಕಾರಣಗಳನ್ನು ಗುರುತಿಸುವ ನಿಟ್ಟಿನಲ್ಲಿ ಮೌಲ್ಯಮಾಪನ ಮಾಡುವುದು.<br>(ಉದಾಹರಣೆಗೆ ಕಲಿಕೆ ಅಂಶ ಉಡುಪಿ ಜಿಲ್ಲೆಯಲ್ಲಿ ಉತ್ತಮವಾಗಿದ್ದಲ್ಲಿ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಏಕೆ ಕುಂಠಿತ ಫಲಿತಾಂಶವಿರುತ್ತದೆ. ಕಲ್ಯಾಣ ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿ ಉತ್ತಮ ಫಲಿತಾಂಶವಿದ್ದಲ್ಲಿ, ಇತರೆ ಪ್ರದೇಶಗಳಲ್ಲಿ ಏಕೆ ಸಾಧಿಸಲಾಗುತ್ತಿಲ್ಲ ಎಂಬ ಅಂಶಗಳನ್ನು ಗುರುತಿಸುವುದು.<br>ಆ) ರಾಜ್ಯದಲ್ಲಿ ಶೇ. 100 ಸಾಕ್ಷರಣತೆ ಹೇಗೆ ಸಾಧಿಸುವುದು (ದ. ಕನ್ನಡದಲ್ಲಿ ಶೇ. 100 ಸಾದನೆಯಾದರೆ ಕಲ್ಯಾಣ ಕರ್ನಾಟಕದಲ್ಲಿ ಏಕೆ ಸಾಧಿಸಲಾಗುತ್ತಿಲ್ಲ) ರಾಜ್ಯದ ಮಹಿಳಾ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗಗಳು ಏಕೆ ಸಾಧಿಸಲಾಗುತ್ತಿಲ್ಲ?<br>ಇ) ರಾಜ್ಯದ ಅನುದಾನದಲ್ಲಿ ಉತ್ತಮ ಕಲಿಕೆಯ ಫಲಿತಾಂಶ ಸಾಧಿಸುವ ಬಗ್ಗೆ ಹೇಗೆ ಖಾತರಿಪಡಿಸುವುದು? ಅಧ್ಯಾಪಕರ ಕಾರ್ಯಕ್ಷಮತೆಯಿಂದ ಉತ್ತಮ ಫಲಿತಾಂಶ ಸಾಧಿಸಲು ವಿಧಾನಗಳನ್ನು ಗುರುತಿಸುವುದು, ಏಕೆಂದರೆ ಶಿಕ್ಷಣದ ಬಹುಪಾಲು ಅನುದಾನ ವೇತನ ವೆಚ್ಚಕ್ಕೆ ಉಪಯೋಗಿಸಲಾಗುತ್ತಿದೆ. |

| | |
|---|---|
| | ಈ) ರಾಜ್ಯವು ವ್ಯಯಮಾಡುವ ಅನುದಾನವು ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಉಪಯೋಗಿಸುವ ಬಗ್ಗೆ, ವಿದ್ಯಾರ್ಥಿಗಳು ಪ್ರೌಢ ಶಿಕ್ಷಣದಿಂದ ಉನ್ನತ ವ್ಯಾಸಾಂಗ ಮುಂದುವರಿಸುವ ಬಗ್ಗೆ ಹೇಗೆ ಖಚಿತಪಡಿಸಿಕೊಳ್ಳುವುದು ಎಂಬ ಅಂಶಗಳನ್ನು ಮೌಲ್ಯಮಾಪನ ಮಾಡುವುದು. ಪ್ರಾರ್ಥಮಿಕದಿಂದ ಫ್ರೌಢಶಿಕ್ಷಣಕ್ಕೆ ಮುಂದುವರೆದು ಉನ್ನತ ವ್ಯಾಸಂಗದ ಹಂತದವರೆಗೂ ವಿದ್ಯಾರ್ಥಿಗಳು ಮುಂದುವರಿಸುವ ಬಗ್ಗೆ ಅಧ್ಯಯನ.<br><br>ಉ) ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲೆ ಸಾಕಷ್ಟು ಕಡಿಮೆ ಪ್ರಮಾಣ ಇರುವುದರಿಂದ, ಖಾಸಗಿ ಶಾಲೆಗಳಲ್ಲಿ RTE ವಿದ್ಯಾರ್ಥಿಗಳ ದಾಖಲಾತಿಗಳಿಗೆ ಏಕೆ ಅನುಮೋದಿಸಬೇಕೆಂಬ ಅಂಶವನ್ನು ಅಧ್ಯಯನ ಮಾಡುವುದು.<br><br>ಊ) ರಾಷ್ಟ್ರದ ಹಲವು ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಉತ್ತಮ ಸಾಧನೆ ಇದ್ದು, ಇತರೆ ರಾಜ್ಯಗಳ ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗಳಿಗೆ ಸಮಾನವಾಗಿ ಪ್ರಗತಿ ಸಾಧಿಸಲು ಅಡಚಣೆಯಾಗುತ್ತಿರುವ ಅಂಶಗಳನ್ನು ಗುರುತಿಸುವುದು (ಉದಾ: ದೆಹಲಿಯಲ್ಲಿ ಸರ್ಕಾರಿ ಶಾಲೆಗಳು ಉತ್ತಮವಾಗಿ ನಿರ್ವಹಿಸುತ್ತಿದ್ದು ಕರ್ನಾಟಕದಲ್ಲಿ ಏಕೆ ಇಲ್ಲ)<br>4. ಯೋಜನೆಯ ಅನುಷ್ಠಾನ ಪರಿಣಾಮವು ಸಾಕ್ಷರಸ್ಥ ಮತ್ತು ಅನಕ್ಷರಸ್ಥರ ಶೇಕಡದ ಮೇಲೆ ಪ್ರಭಾವನ್ನು 2016-17 ರಿಂದ 2020-21 ರವರೆಗೆ ಗುರುತಿಸುವುದು. ಕೋವಿಡ್ ಮುಂಚೆ ಮತ್ತು ನಂತರದ ಅವಧಿಯಲ್ಲಿ ಆದ ಬದಲಾವಣೆಗಳನ್ನು ಅಧ್ಯಯನ ಮಾಡುವುದು.<br>5. ವಿದ್ಯಾಭಾಸದಲ್ಲಿ ವೃತ್ತಿಪರ ಶಿಕ್ಷಣದ ಅಳವಡಿಕೆ ಮತ್ತು ಅದರ ಪರಿಣಾಮದಿಂದ ಉದ್ಯೋಗ ಲಭ್ಯವಾಗುವ ಅವಕಾಶಗಳ ಬಗ್ಗೆ ಅಧ್ಯಯನ (ಪ್ರಮುಖವಾಗಿ ಹೆಚ್ಚು ವೇತನವಿರುವ, ಉನ್ನತ ಹುದ್ದೆಗಳು).<br><br>6. ಮಾದರಿಗಳನ್ನು ಪ್ರಮುಖವಾಗಿ aspirational education ತಾಲ್ಲೂಕುಗಳಲ್ಲಿ ಪಡೆದು non-aspirational taluks ಗಳಿಗೆ ಹೋಲಿಸುವುದು. ಮಾದರಿಗಳನ್ನು ಪ್ರಾಥಮಿಕ, ಪ್ರೌಢ ಮತ್ತು ಉನ್ನತ ವ್ಯಾಸಂಗ |

| | |
|---|---|
| | ಈ ಎಲ್ಲಾ ಹಂತಗಳಲ್ಲಿ ಮಾಡಿದಲ್ಲಿ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣಕ್ಕೆ ತಲುಪಿರುವ ಮಾಹಿತಿ ಪಡೆಯಬಹುದಾಗಿದೆ.<br>7. ಯುವ ಇಲಾಖೆಯ HDI ವಿಶ್ಲೇಷಣೆ ಆಧಾರದನ್ವಯ ಶೇ. 10 ರಷ್ಟು ಯುವ ಪೀಳಿಗೆ ಮಾತ್ರ ವ್ಯವಸ್ಥಿತ ವಲಯಗಳಲ್ಲಿ ನೌಕರಿ ಹೊಂದುತ್ತಿದ್ದು, ಉಳಿದವರು ಅವ್ಯವಸ್ಥಿತ ವಲಯಗಳಲ್ಲಿ ನೌಕರಿ ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಅವ್ಯವಸ್ಥಿತ ವಲಯದಲ್ಲಿ ಇರುವ ಯುವ ಪೀಳಿಗೆಯನ್ನು ವ್ಯವಸ್ಥಿತ ವಲಯಗಳಿಗೆ ಅರ್ಹರಾಗುವಂತೆ ಔದ್ಯೋಗಿಕ ಅಥವಾ ಕೌಶಲ್ಯಾಭಿವೃದ್ಧಿ ಮಾಡುವುದು ಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಮೌಲ್ಯಮಾಪನ ಮಾಡುವುದು.<br>8. ಹಾಲಿ ಇರುವ ಪ್ರಸ್ತಾವನೆಯಲ್ಲಿ ಇರುವುದಕ್ಕಿಂತ ಅರ್ಧದಷ್ಟು ಮಾದರಿಗಳ ಸಂಖ್ಯೆ ಕಡಿಮೆಗೊಳಿಸುವುದು ಮತ್ತು ಎಲ್ಲಾ ಭಾಗಗಳ ಪ್ರತಿನಿಧಿ ಮಾದರಿಗಳು ಒಳಗೊಂಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು.<br>9. ರಾಜ್ಯದ ವಿದ್ಯಾಭ್ಯಾಸ ಯೋಜನೆಗಳಲ್ಲಿ ಮೂಲಸೌಕರ್ಯ ಲಭ್ಯತೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಪಾತ, ತಾಂತ್ರಿಕತೆ ಸಂಬಂಧಿಸಿದ ಕಲಿಕೆ ಕಾರ್ಯಕ್ರಮಗಳು (TALP) ಕಲಿಕೆ ಫಲಿತಾಂಶಗಳಲ್ಲಿ ಹೇಗೆ ಪರಿಣಾಮ ಬೀರುತ್ತದೆ ಎಂದು ಅಧ್ಯಯನ ಮಾಡಿದಲ್ಲಿ ಆರ್ಥಿಕ ಇಲಾಖೆಯು ಯಾವ ಘಟಕಕ್ಕೆ ಹೆಚ್ಚು ಅನುದಾನ ಒದಗಿಸಬೇಕೆಂಬುದು ನಿರ್ಣಯಿಸಲು ಸಹಕಾರಿಯಾಗುತ್ತದೆ.<br>10. ಶಾಲೆಗಳಲ್ಲಿ ಶಿಕ್ಷಕರ ಕೊರತೆ, ಇಲ್ಲವೆ ವಿದ್ಯಾರ್ಥಿಗಳ ಕೊರತೆಯಿದ್ದು, ಇಂತಹ ಶಾಲೆಗಳಲ್ಲಿ ಕಲಿಕೆ ಫಲಿತಾಂಶ ಸುಧಾರಿಸುಲು ಪದ್ಧತಿಗಳನ್ನು ಸೂಚಿಸುವುದು.<br>11. ಪ್ರಸ್ತುತ ಇರುವ ವಿದ್ಯಾಭ್ಯಾಸ ಪದ್ಧತಿಯು ನೂತನ ವಿದ್ಯಾಭ್ಯಾಸ ನೀತಿಗೆ ಹೇಗೆ ಸಹಕಾರಿಯಾಗುತ್ತದೆ ಎಂಬುದನ್ನು ಹಾಲಿ ಇರುವ ಕೌಶಲ್ಯಾಭಿವೃದ್ಧಿ ಮಾಹಿತಿಯನ್ವಯ ಅಧ್ಯಯನ ಮಾಡುವುದು. |

| | | |
|---|---|---|
| | 12. ರಾಜ್ಯದಲ್ಲಿ ಅಥವಾ ಹೊರ ರಾಜ್ಯಗಳಲ್ಲಿ ಅಥವಾ ವಿದೇಶಗಳಲ್ಲಿ ಲಭ್ಯವಿರುವ ಉತ್ತಮ ಕಲಿಕಾ ಪದ್ಧತಿಗಳನ್ನು ಗುರುತಿಸಿ ಕರ್ನಾಟಕ ರಾಜ್ಯಕ್ಕೆ ಅನುಗುಣವಾಗಿ ರೂಪಿಸಲು ಅಧ್ಯಯನ ಮಾಡುವುದು. | |
| **ಕಾರ್ಯಸೂಚಿ 2.** | **ರಾಜ್ಯದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ಮುಖ್ಯಮಂತ್ರಿ ಸೂಕ್ಷ್ಮ ನೀರಾವರಿ ಯೋಜನೆ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ (PMFBY), ಪಾಲಿಹೌಸ್ ಮತ್ತು ಹಾಲು ಉತ್ಪಾದಕರ ಪ್ರೋತ್ಸಾಹ ಧನ ಯೋಜನೆಗಳು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ರೈತರ ಸಾಮಾಜಿಕ-ಆರ್ಥಿಕ ಸುಧಾರಣೆ ಮೇಲೆ ಆಗುವ ಪರಿಣಾಮದ ಮೌಲ್ಯಮಾಪನ (2017-18 ರಿಂದ 2019-20)** | **ಕೃಷಿ ಇಲಾಖೆ, ತೋಟಗಾರಿಕೆ, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಮಾದರಿಗಳನ್ನು ಮತ್ತು ಮೌಲ್ಯಮಾಪನ ಪ್ರಶ್ನೆಗಳನ್ನು, ಯೋಜನೆಗಳನ್ನು ಒಗ್ಗೂಡಿಸಿದಂತೆ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಮೌಲ್ಯಮಾಪನ ಸಂಬಂಧ ಒಗ್ಗೂಡಿಸುವುದು.<br>2. ರಾಜ್ಯದ ಉಳಿದ ಇತರೆ ವರ್ಗಗಳಿಗೆ ಹೋಲಿಸಿದಲ್ಲಿ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ರೈತರಿಗೆ ಸಮನಾದ ಅನುಪಾತದಲ್ಲಿ ಎಲ್ಲಾ ಯೋಜನೆಗಳ ಸೌಲಭ್ಯಗಳು ಲಭ್ಯವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು? ಅನುಪಾತ ಕಡಿಮೆಯಿದ್ದಲ್ಲಿ, ಇತರೆ ವರ್ಗಗಳಿಗಿಂತ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ಏಕೆ ಕಡಿಮೆ ಎಂದು ವಿಶ್ಲೇಷಿಸುವುದು.<br>3. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳಲ್ಲಿ ಇದುವರೆಗೂ ಯಾವುದೇ ರೀತಿ ಸೌಲಭ್ಯ ಪಡೆದ ರೈತರ ಸಂಖ್ಯೆ ಮತ್ತು ಕೆಲವರು ಹಲವಾರು ಬಾರಿ ಸೌಲಭ್ಯಪಡೆದಲ್ಲಿ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಗುರುತಿಸುವುದು. | |

| | |
|---|---|
| | 4. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯು ಕಾರ್ಯಾಚರಣೆ ಮತ್ತು ಪರಿಣಾಮದಿಂದ ರೈತರ ಆದಾಯ ಮತ್ತು ಜೀವನೋಪಾದಿಯಲ್ಲಿ ಸುಸ್ಥಿರತೆ ಸಾಧಿಸಿರುವ ಬಗ್ಗೆ ಪರಿಗಣಿಸುವುದು.<br>5. ನಮ್ಮ ರೈತರು ಅಪಾಯಕ್ಕೆ ಈಡಾಗುವ ಸಂಭವಗಳೆಷ್ಟು? ಜಿಲ್ಲಾವಾರು, ಬೆಳೆವಾರು ಹೆಚ್ಚು ಹಾನಿ ಸಂಭವಿಸುವ ವಿವರಗಳನ್ನು ಪಡೆದು ಮತ್ತು ಅವುಗಳನ್ನು ಸುಧಾರಿಸಲು ಕಾರ್ಯನೀತಿಗಳನ್ನು ರೂಪಿಸುವುದು.<br>6. ಹಾನಿ ಸಂಭವಿಸುವ ಸಂದರ್ಭಗಳನ್ನು ಹೇಗೆ ಕಡಿಮೆ ಮಾಡುವುದು? ಸಂಸ್ಥೆಯಾಧಾರಿತ, ಬೆಳೆ ಪದ್ಧತಿ, ಕಾರ್ಯನೀತಿಯ ಸುಧಾರಣೆ ಅಂಶಗಳನ್ನು ಒಳಪಡಿಸುವುದು.<br>7. ರೈತರು ಅಸ್ಥಿರ ಆದಾಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸರ್ಕಾರವು ರೂಪಿಸಿರುವ ಹಲವಾರು ರೈತಪರ ಯೋಜನೆಗಳಿಂದ ರೈತರು ಸುಸ್ಥಿರ ಆದಾಯವನ್ನು ಮತ್ತು ಖಚಿತ ಜೀವನೋಪಾಯವನ್ನು ಪಡೆದಿರುವ ಅಂಶವನ್ನು ಅಧ್ಯಯನ ಮಾಡುವುದು.<br>8. ಮಾದರಿಗಳಲ್ಲಿ ಪ್ರಮುಖವಾಗಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ರೈತರನ್ನು ಪರಿಗಣಿಸುವುದು ಮತ್ತು ತುಲನೆ ಮಾಡಲು ಇತರೆ ವರ್ಗಗಳ ರೈತರನ್ನು ಪರಿಗಣಿಸುವುದು.<br>9. ಯೋಜನೆಗಳು ಒಂದಕ್ಕೊಂದು ಸಂಭಂದವಿದ್ದು, ಕೆಲವೊಂದು ಒಂದೇ ರೀತಿಯ ಸೌಲಭ್ಯವನ್ನು ಒದಗಿಸುವ ಸಾಧ್ಯತೆಗಳಿವೆ ಆದ್ದರಿಂದ ಯೋಜನೆವಾರು, ಒಗ್ಗೂಡಿಸುವ ಪರಿಶೀಲನೆ ಬಹುಮುಖ್ಯ.<br>10. ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಭಾಗಿದಾರರು ಈ ಯೋಜನೆಯು ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಪಶುಸಂಗೋಪನೆ ಈ ಎಲ್ಲಾ ಇಲಾಖಾ ವ್ಯಾಪ್ತಿಗೆ ಒಳಪಟ್ಟಿದ್ದು, ಅನುಷ್ಠಾನದಲ್ಲಿ ಅಸೌಖ್ಯತೆ ಇರುವುದರಿಂದ, ಈ ಕುರಿತು ಅಧ್ಯಯನ ಮಾಡುವುದು ಸೂಕ್ತ. |

| | |
|---|---|
| | 11. ಸಮಗ್ರ ಕೃಷಿ ಪದ್ಧತಿಯು ರೈತರ ಆದಾಯ ಹೆಚ್ಚಿಸುವಲ್ಲಿ ಮತ್ತು ಸಮಸ್ಯೆಗಳನ್ನು ಕಡಿಮೆ ಮಾಡುವಲ್ಲಿ ಪೂರಕವಾದ ಪರಿಹಾರವಾಗಿರುತ್ತದೆ. ಆದ್ದರಿಂದ ರೈತಪರ ಯೋಜನೆಗಳನ್ನು ರೂಪಿಸುವಾಗ ಸರ್ಕಾರವು ಕೃಷಿ ಮತ್ತು ಕೃಷಿ ಸಂಭಂದಿತ ಯೋಜನೆಗಳ ಒಗ್ಗೂಡುವಿಕೆ ಮಾಡಿ ರೈತರ ಸಮಗ್ರ ಅವಶ್ಯಕತೆಗಳನ್ನು ಪೂರೈಸಿ ಸಮಗ್ರ ಕೃಷಿ ಪದ್ಧತಿಯನ್ನು ರೈತ ಅಳವಡಿಸಿಕೊಳ್ಳಲು ಉತ್ತೇಜಿಸುವಲ್ಲಿ ಕಾರ್ಯನೀತಿ ರೂಪಿಸುವಲ್ಲಿ ಅಧ್ಯಯನ.<br>12. ಕೆಲವು ರೈತರು ಹೆಚ್ಚು ಯೋಜನಾ ಸೌಲಭ್ಯಗಳನ್ನು ಪಡೆದು ಪ್ರಗತಿ ಹೊಂದುತ್ತಿದ್ದು ಕೆಲವರಿಗೆ ಸೌಲಭ್ಯಗಳು ಏಕೆ ದೊರೆಯುತ್ತಿಲ್ಲ? ಈ ಅಂಶಗಳನ್ನು ಮಾದರಿವಾರು ಪರಿಶೀಲಿಸಲು ಮೌಲ್ಯಮಾಪನ ಅಧ್ಯಯನದಲ್ಲಿ ಸೇರ್ಪಡಿಸುವುದು.<br>13. ಸದರಿ ಅಧ್ಯಯನದಲ್ಲಿ ಇದೇ ರೀತಿಯ ಹಲವು ಕಾರ್ಯಮಿತಿ ಯೋಜನೆಗಳಾದ, ರೈತಪರ ಕೃಷಿ ಯಾಂತ್ರೀಕರಣ ಯೋಜನೆಗಳನ್ನು ಮೌಲ್ಯಾಮಾಪನೆಗೆ ಅಳವಡಿಸುವುದು.<br>14. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಮತ್ತು ಇತರೆ ವರ್ಗಗಳ ಅಭಿವೃದ್ಧಿಯಲ್ಲಿ ಇರುವ ಅಂತರಗಳನ್ನು ಕಡಿಮೆಗೊಳಿಸುವುದು ಹೇಗೆಂಬ ಬಗ್ಗೆ ಅಧ್ಯಯನ ಮಾಡುವುದು?<br>15. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ರೈತರ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಅಡಚಣೆ ಮಾಡುತ್ತಿರುವ ಅಂಶಗಳ ಕುರಿತು ಗಮನ ಹರಿಸುವುದು.<br>16. ಬೇಡಿಕೆ ಮತ್ತು ಸರಬರಾಜು ವಿಶ್ಲೇಷಣೆ – ಭೌತಿಕ ಮತ್ತು ಆರ್ಥಿಕ ವಿಶ್ಲೇಷಣೆ.<br>17. ರೈತರಿಗೆ ವಿವಿಧ ಯೋಜನೆಗಳ ಅರಿವಿರುತ್ತದೆಯೇ? ಅರ್ಜಿ ಸಲ್ಲಿಸುವ ವಿಧಾನ ಕಷ್ಟಕರವಾಗಿರುತ್ತದೆಯೇ? ಸೌಲಭ್ಯ ಪಡೆಯಲು ತಡೆಯುತ್ತಿರುವ ಅಂಶಗಳು ಯಾವುವು? ಈ ಎಲ್ಲ ಅಂಶಗಳ ಕಾರಣಗಳನ್ನು ತಿಳಿಯುವುದು. |

| | | |
|---|---|---|
| | 18. ರೈತರಿಗೆ ಜಮೀನು ಮತ್ತು ನೀರಿನ ಲಭ್ಯತೆ ವಿಶ್ಲೇಷಣೆಯನ್ನು ಪರಿಗಣಿಸಿ ಯೋಜನೆಗಳ ಪ್ರಚಾರಕ್ಕೆ ಅಳವಡಿಸುವುದು ಪ್ರಮುಖವಾಗಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY).<br>19. ಯುವ ಪೀಳಿಗೆ ಏಕೆ ಕೃಷಿ ಮಾಡುತ್ತಿಲ್ಲ? ಏಕೆ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.<br>20. ಸುಸ್ಥಿತ ಅಭಿವೃದ್ಧಿ ಗುರಿಗಳನ್ನು ಉತ್ತಮವಾಗಿ ಸಾಧಿಸಲು ಯಾವ ಮೌಲ್ಯಮಾಪನ ಅಂಶಗಳು ರೈತರ ಆದಾಯ ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಿದೆ. | |
| **ಕಾರ್ಯಸೂಚಿ 3.** | **ಪ್ರಧಾನಮಂತ್ರಿಗಳ 15 ಅಂಶಗಳ ಅಲ್ಪಸಂಖ್ಯಾತ ಕಾರ್ಯಕ್ರಮವನ್ನು ಕರ್ನಾಟಕದ ರಾಜ್ಯದಲ್ಲಿ 2015-16 ರಿಂದ 2020-21ರ ಅವಧಿಯ ಅನುಷ್ಠಾನ ಮೌಲ್ಯಮಾಪನ** | **ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗ** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಸುಸ್ಥಿರ ಅಭಿವೃದ್ಧಿ ಗುರಿಗಳು ವಿವಿಧ ಪ್ರದೇಶವಾರು/ಧರ್ಮವಾರು ವಿಸ್ತರಿಸಿರುವುದು ಸಮುದಾಯದ ಮೇಲಾಗುವ ಪರಿಣಾಮ ಮೌಲ್ಯಮಾಪನ ಮಾಡಿ ಸಮುದಾಯಗಳ ಸಾಕ್ಷರತೆ, ಉದ್ಯೋಗಾವಕಾಶಗಳು ಮತ್ತು ಆದಾಯಗಳ ಅಂತರವನ್ನು ಕಡಿಮೆಗೊಳಿಸಲು ಅಧ್ಯಯನ. ಈ ನಿಟ್ಟಿನಲ್ಲಿ ಒಂದು ಮಾದರಿ ಅಧ್ಯಯನ ಮಾಡಿದಲ್ಲಿ, ಅನುದಾನವನ್ನು ಸಮುದಾಯವಾರು ಆಧ್ಯತೆಮೇರೆಗೆ ಮರುಹಂಚಿಕೆ ಮಾಡಲು ಸಹಾಯಕಾರಿಯಾಗುವುದು.<br>2. ಅಲ್ಪ ಸಂಖ್ಯಾತ ಫಲಾನುಭವಿಗಳ ಜೀವನೋಪಾಯದ ಆಯ್ಕೆಗಳು ಮತ್ತು ಆಸ್ತಿ ವಿವರಗಳನ್ನು ಗುರುತಿಸಿ ಯಾರು ಪ್ರಗತಿ ಸಾಧಿಸುತ್ತಿದ್ದಾರೆ. ಯಾರು ಸಾಧಿಸುತ್ತಿಲ್ಲ ಎಂದು ಅಧ್ಯಯನ.<br>3. ಮಾದರಿ ಸಂಖ್ಯೆಗಳನ್ನು ಹಾಲಿಯಿರುವ ಸಂಖ್ಯೆಯಲ್ಲಿ ಅರ್ಧದಷ್ಟು ಆಯ್ಕೆಮಾಡಿ ವಿವಿಧ ಯೋಜನೆಯಡಿ ಒಗ್ಗೂಡಿಕೆಗೆ ಗಮನ ಹರಿಸುವುದು, | |

| | | |
|---|---|---|
| | ಮಾದರಿಯಲ್ಲಿ ಪ್ರಮುಖವಾಗಿ ಅಲ್ಪಸಂಖ್ಯಾತರು ಒಳಗೊಂಡಿದ್ದು, ಹೋಲಿಕೆ ಮಾಡಲು ಇತರೆ ಸಾಮಾಜಿಕ ಗುಂಪುಗಳ ಕೆಲವು ಮಾದರಿಗಳನ್ನು ಆಯ್ಕೆ ಮಾಡುವುದು.<br>4. ಅಲ್ಪ ಸಂಖ್ಯಾತರ ಸಾಕ್ಷರತೆ, ಕಲಿಕೆ ಫಲಿತಾಂಶ ಮತ್ತು ಆದಾಯಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಮತ್ತು ಇತರೆ ಸಾಮಾಜಿಕ ಗುಂಪುಗಳ ಅಧ್ಯಯನ. ಈ ಎಲ್ಲಾ ಅಂಶಗಳನ್ನು ಅಲ್ಪ ಸಂಖ್ಯಾತರಲ್ಲಿ ಸುಧಾರಣೆ ಮಾಡಲು ಅವಶ್ಯ ಕ್ರಮಗಳು.<br>5. ಭೌಗೋಳಿಕವಾಗಿ ಯಾವ ಸಮುದಾಯಕ್ಕೆ ಯಾವ ಯೋಜನೆಯನ್ನು ಪ್ರಮುಖವಾಗಿ ಅಳವಡಿಸುವ ಬಗ್ಗೆ ಗುರುತಿಸುವುದು?<br>6. ರಾಜ್ಯದ ಸರಾಸರಿಗಿಂತ ಯಾವ ಅಲ್ಪ ಸಂಖ್ಯಾತರು ಒಳಪಡುತ್ತಾರೋ ಅಂತಹ ಸಮುದಾಯವನ್ನು ದೀರ್ಘ ವಿಶ್ಲೇಷಣೆಗೆ ಪರಿಗಣಿಸುವುದು.<br>7. ರಾಜ್ಯ ಮತ್ತು ಕೇಂದ್ರ ಮಟ್ಟದ ಸೇವೆಗಳಲ್ಲಿ ಆದ ನೇಮಕಗಳನ್ನು ಸೇರಿಸುವುದು.<br>8. ಸಮುದಾಯ ಗಲಭೆಗಳನ್ನು ತಡೆಯಲು ಕಳೆದ 10–15 ವರ್ಷಗಳ ಕೋಮು ಗಲಭೆಗಳ ಅಪರಾಧ ದಾಖಲೆಗಳನ್ನು ಪರಿಶೀಲಿಸಿ, ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಪೋಲಿಸ್ ಠಾಣೆಗಳಲ್ಲಿ ತೆಗೆದುಕೊಂಡ ಸುಧಾರಣಾಕ್ರಮಗಳ ಅಧ್ಯಯನ. | |
| **ಕಾರ್ಯಸೂಚಿ 4.** | **ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಅನುಷ್ಠಾನ ಮೌಲ್ಯಮಾಪನ** | **ಕೃಷಿ ಇಲಾಖೆ** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಅಧ್ಯಯನವು ಪ್ರಮುಖವಾಗಿ ದ್ವಿದಳಧಾನ್ಯ ಎಣ್ಣೆಕಾಳುಗಳು ಮತ್ತು Nutri ಸಿರಿದಾನ್ಯಗಳ ಬಗ್ಗೆ ಕೇಂದ್ರೀಕರಿಸುವುದು.<br>2. ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನವು ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವಲ್ಲಿ ರೈತರಿಗೆ ಪ್ರೇರೆಪಿಸಿದೆಯಾ? ವಿಸ್ತೀರ್ಣ, ಉತ್ಪಾದನೆ, ಉತ್ಪಾದಕತೆ ಹೆಚ್ಚಿಸಲು ಪ್ರಭಾವನ ಬೀರುವ ಅಂಶಗಳು | |

| | |
|---|---|
| | 3. ಪ್ರಸ್ತುತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದ ರಾಜ್ಯದ ವಾರ್ಷಿಕ ಕ್ರಿಯಾಯೋಜನೆಯನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಇದರ ಪರಿಣಾಮ ಯೋಜನಾ ಅನುಷ್ಠಾನ ಮೇಲೆ ಹೇಗೆ ಪರಿಣಮಿಸುತ್ತದೆಯೆಂದು ಅಧ್ಯಯನ.<br>4. ಕರ್ನಾಟಕ ರಾಜ್ಯವು ಬೇಳೆಕಾಳು ಉತ್ಪಾದನೆಯಲ್ಲಿ 2ನೇ ಸ್ಥಾನಗಳಿಸಿದ್ದು, ಉತ್ಪಾದಕತೆ ಇತರೆ ರಾಜ್ಯಗಳಿಗೆ ಹೋಲಿಸಿದಲ್ಲಿ, ಅರ್ಧದಷ್ಟು ಇರುತ್ತದೆ. ಬೇಳೆಕಾಳು ಉತ್ಪಾದನೆ ಹೇಗೆ ಹೆಚ್ಚಿಸುವುದು?<br>5. ಹೆಚ್ಚಿನ ಬೇಡಿಕೆ ಇದ್ದರೂ ಸಹ, ಎಣ್ಣೆಕಾಳು ವಿಸ್ತೀರ್ಣವು ಹೆಚ್ಚಾಗಿ ಕಡಿಮೆಯಾಗುತ್ತಿದ್ದು, ರಾಜ್ಯದಲ್ಲಿ ಎಣ್ಣೆಕಾಳುಗಳ ವಿಸ್ತೀರ್ಣ ಹೇಗೆ ಹೆಚ್ಚಿಸುವುದು?<br>6. ರೈತರು ಇಂದು ಸಹ ತುಂಬಾ ಹಳೆಯ (ಸಾಂಪ್ರದಾಯಿಕ) ತಳಿಗಳನ್ನು, ಕಡಿಮೆ ಇಳುವರಿ ಇದ್ದರೂ ಬಳಸುತ್ತಿದ್ದಾರೆ. ಹೊಸ ತಳಿಗಳು (10 ವರ್ಷ ಕ್ಕಿಂತ ಕಡಿಮೆ) ಜನಪ್ರಿಯವಾಗುತ್ತಿಲ್ಲ. ಹಳೆ ಸಾಂಪ್ರದಾಯಿಕ ತಳಿಗಳನ್ನು ಹೇಗೆ ಪ್ರೋತ್ಸಾಹಿಸಬೇಕು.<br>7. ಸದರಿ ಯೋಜನೆಯನ್ನು ಮುಂದುವರಿಸಲು ಪರಿಣಾಮ ಮಾಡುವ ಅಂಶಗಳಾವುದು?<br>8. ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಅವಕಾಶಗಳ ಮೌಲ್ಯಮಾಪನ ಮತ್ತು ಸುಧಾರಿಸಲು ಸಲಹೆಗಳು.<br>9. ಸದರಿ ಅಧ್ಯಯನವು ಕೃಷಿ ಯೋಗ್ಯವಲ್ಲದ ವಿಸ್ತೀರ್ಣವನ್ನು ಕೃಷಿಯೋಗ್ಯವಾಗಿ ಪರಿವರ್ತಿಸಲು ಮಾರ್ಗೋಪಾಯಗಳನ್ನು ಸೂಚಿಸುವುದು.<br>10. ಕೃಷಿ ಯೋಗ್ಯವಲ್ಲದ ವಿಸ್ತೀರ್ಣ ಹೆಚ್ಚಾಗುತ್ತಿರುವ ಕಾರಣಗಳನ್ನು ಗುರುತಿಸುವುದು.<br>11. ಭತ್ತದ ಬೀಳು ಪ್ರದೇಶ (Rice Fallow) ಪ್ರದೇಶಗಳಲ್ಲಿ ಬೇಳೆಕಾಳು ಮತ್ತು ಎಣ್ಣೆಕಾಳು ಕೃಷಿ ಅಳವಡಿಸುವುದು. (Targeted Rice Fallow Area |

| | | |
|---|---|---|
| | sub scheme of GNFSM) ಉಪಯೋಜನೆಯ ಕುಂಠಿತ ಪ್ರಗತಿಗೆ ಕಾರಣಗಳು ಗುರುತಿಸುವುದು. | |
| **ಕಾರ್ಯಸೂಚಿ 5** | **2014 ರಿಂದ 2021 ರವರೆಗೆ ಕರ್ನಾಟಕದಲ್ಲಿ ಸ್ವಚ್ಛ ಭಾರತ್ ಮಿಷನ್ ನಗರದ ಮೌಲ್ಯಮಾಪನ** | **ನಗರಾಭಿವೃದ್ಧಿ ಇಲಾಖೆ** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಅಧ್ಯಯನದ ಹಿನ್ನೆಲೆಯಲ್ಲಿ SDG ಇಂಡಿಯಾ ಇಂಡೆಕ್ಸ್ ವರದಿಯಿಂದ ಕರ್ನಾಟಕದ ಬಯಲು ಶೌಚ ಮುಕ್ತದ ಸ್ಥಿತಿಗತಿಯ ದತ್ತಾಂಶವನ್ನು ಸೇರಿಸಿ.<br>2. ನಿರ್ದಿಷ್ಟಪಡಿಸಬೇಕಾದ ಮೌಲ್ಯಮಾಪನ ಉದ್ದೇಶಗಳು. ಉದ್ದೇಶ– "ಆರೋಗ್ಯ, ಪರಿಸರ ಮತ್ತು ಜೀವನದ ಗುಣಮಟ್ಟದ ಮೇಲೆ ಯೋಜನೆಯ ಪ್ರಭಾವವನ್ನು ನಿರ್ಣಯಿಸುವುದು" ನಿರ್ದಿಷ್ಟ ಉದ್ದೇಶಗಳು ಮತ್ತು ದತ್ತಾಂಶದೊಂದಿಗೆ ವಿಶಾಲ ಉದ್ದೇಶವನ್ನು ರೂಪಿಸುತ್ತದೆ. ಆರೋಗ್ಯ, ಪರಿಸರ ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸಲು ಸ್ವಚ್ಛ ಭಾರತ್ ಮಿಷನ್ ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಹೇಗೆ?<br>3. ಉದ್ದೇಶಗಳನ್ನು NFHS–5 ಮತ್ತು NCRB ಯಿಂದ ನಿರ್ದಿಷ್ಟ ದತ್ತಾಂಶದೊಂದಿಗೆ ಲಿಂಕ್ ಮಾಡುವುದು. ಅಂದರೆ, ಅತಿಸಾರದಿಂದ ಸಾಯುತ್ತಿರುವ ಮಕ್ಕಳು ಮತ್ತು ವಯಸ್ಕರ ಸಂಖ್ಯೆ, ರಕ್ತಹೀನತೆ ಹೊಂದಿರುವ ಮಕ್ಕಳು ಮತ್ತು ಮಹಿಳೆಯರ ಸಂಖ್ಯೆ, ಇತರ ನೈರ್ಮಲ್ಯ ಸಂಬಂಧಿತ/ಹರಡುವ ರೋಗಗಳಿಂದ ಬಳಲುತ್ತಿರುವ ಜನರ ಸಂಖ್ಯೆ, ಮಹಿಳೆಯರ ವಿರುದ್ಧದ ಅಪರಾಧ ದರಗಳು.<br>4. ಮೌಲ್ಯಮಾಪನ ವಿಷಯಗಳು: (ಎ) IHHL, CT, PT ಯ ಬಳಕೆ ಮತ್ತು ಬಳಕೆಯಾಗದಿರುವುದು; ಬಳಕೆಯಾಗದ ಕಾರಣಗಳು, ಪರ್ಯಾಯಗಳನ್ನು ಗುರುತಿಸುವುದು; (ಬಿ) ಘನ ತ್ಯಾಜ್ಯ ನಿರ್ವಹಣೆ ಗಳನ್ನು ಒಳಗೊಂಡಿರಬೇಕು. | |

| | | |
|---|---|---|
| | 5. ಘನ ತ್ಯಾಜ್ಯ ನಿರ್ವಹಣೆ (SWM)– ಪರಿಸರದ ಮೇಲೆ ತ್ಯಾಜ್ಯ ನಿರ್ವಹಣೆಯ ಪರಿಣಾಮಗಳೇನು? ತ್ಯಾಜ್ಯ ನಿರ್ವಹಣೆಯ ವೆಚ್ಚ ಎಷ್ಟು? SWM ಪರಿಣಾಮಕಾರಿಯಾಗದಿದ್ದಲ್ಲಿ ಪರ್ಯಾಯಗಳು ಯಾವುವು?<br>6. ಜಲ ಜೀವನ್ ಮಿಷನ್ ಮತ್ತು ಜೈವಿಕ ಅನಿಲ ಸ್ಥಾವರಗಳ ಜೊತೆಗೆ ಸ್ವಚ್ಛ ಭಾರತ್ ಮಿಷನ್ (ನಗರ)ನ ಉಲ್ಲೇಖಿತ ನಿಯಮಗಳನ್ನು ವಿಲೀನಗೊಳಿಸುವುದು.<br>7. ಸಮುದಾಯ ಶೌಚಾಲಯಗಳನ್ನು ಏಕೆ ಉತ್ತೇಜಿಸಲಾಗಿಲ್ಲ? ಅದರ ಕಾರ್ಯಸಾಧ್ಯತೆಯನ್ನು ಅಧ್ಯಯನ ಮಾಡಬೇಕು.<br>8. ಸ್ವಚ್ಛ ಭಾರತ್ ಮಿಷನ್ ಗ್ರಾಮೀಣವು, ಸ್ವಚ್ಛ ಭಾರತ್ ಮಿಷನ್ ನಗರಕ್ಕಿಂತ ತುಲನಾತ್ಮಕವಾಗಿ ಏಕೆ ಯಶಸ್ವಿಯಾಗಿದೆ.<br>9. ವಾಶ್ ಯೋಜನೆಯೊಂದಿಗೆ ವಿಲೀನಗೊಳಿಸಿ/ ಲಿಂಕ್ ಮಾಡಿ. | |
| **ಕಾರ್ಯಸೂಚಿ 6** | **ಕರ್ನಾಟಕದಲ್ಲಿ 2019–20 ರಿಂದ 2021–22 ರವರೆಗೆ ಜಲ ಜೀವನ್ ಮಿಷನ್ ಕಾರ್ಯನಿರ್ವಹಣೆಯ ಮೌಲ್ಯಮಾಪನ** | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಮೇಲ್ಮೈ ನೀರಿನ ಮೂಲಗಳಿಲ್ಲದ/ಕಡಿಮೆ ಮಳೆಯಿರುವ ಪ್ರದೇಶಗಳಲ್ಲಿ ಯೋಜನೆಯನ್ನು ಹೇಗೆ ಕಾರ್ಯಗತಗೊಳಿಸುವುದು?<br>2. ಯೋಜನೆಯನ್ನು ಉಳಿಸಿಕೊಳ್ಳಲು ಅಸಾಂಪ್ರದಾಯಿಕ/ಸಾಂಪ್ರದಾಯಿಕ ನೀರಿನ ಸಂರಕ್ಷಣಾ ಕಾರ್ಯವಿಧಾನಗಳು ಯಾವುವು?<br>3. ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಎರಡನ್ನೂ ಒಂದೇ ಉಲ್ಲೇಖಿತ ನಿಯಮವಾಗಿ ಸಂಯೋಜಿಸಿ ಮತ್ತು ಈ ಕಾರ್ಯಕ್ರಮಗಳು ಇಕ್ವಿಟಿಯನ್ನು ಉತ್ತೇಜಿಸಿದೆಯೇ ಎಂದು ವಿಶ್ಲೇಷಿಸಿ.<br>4. ಕೇಂದ್ರ, ರಾಜ್ಯ ಮತ್ತು ಇಲಾಖೆ ಮಟ್ಟದಲ್ಲಿ ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಅನುಸರಿಸಲಾಗಿದೆಯೇ ಎಂಬುದನ್ನು ವಿಶ್ಲೇಷಿಸಿ | |

| | | |
|---|---|---|
| | ಮತ್ತು ಯೋಜನೆಗಳ ಅನುಷ್ಠಾನದಲ್ಲಿನ ನಿರ್ಬಂಧಗಳು ಮತ್ತು ಸವಾಲುಗಳನ್ನು ಗುರುತಿಸಿ.<br>5. ಕಾರ್ಯಕ್ರಮವು ನೀರಿನ ಸಮಾನ ಪೂರೈಕೆಯನ್ನು ಒದಗಿಸಲು ಸಾಧ್ಯವಾಗಿದೆಯೇ?<br>6. ನೀರಿನ ಕೊರತೆಯ ಸಂದರ್ಭದಲ್ಲಿ ಯೋಜನೆಯ ಅನುಷ್ಠಾನವನ್ನು ಪರೀಕ್ಷಿಸಿ (ಮೇಲ್ಮೈ ನೀರು ಮತ್ತು ಅಂತರ್ಜಲ).<br>7. ಮರುಬಳಕೆ ಬೂದು ನೀರು ಮತ್ತು ಸಮರ್ಥನೀಯತೆಯ ವಿಷಯಗಳನ್ನು ಪರಿಗಣಿಸುವುದು.<br>8. ನಿಧಿಯ ಬಳಕೆಯಲ್ಲಿನ ಲೋಪಗಳಿಗೆ ಕಾರಣಗಳು.<br>9. SDG ಗುರಿಗಳೊಂದಿಗೆ ಉದ್ದೇಶಗಳನ್ನು ಲಿಂಕ್ ಮಾಡಿ. | |
| **ಕಾರ್ಯಸೂಚಿ 7** | **2016–17 ರಿಂದ 2021–22 ರವರೆಗಿನ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪರಿಣಾಮದ ಮೌಲ್ಯಮಾಪನ** | **ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಈ ಯೋಜನೆಗೆ ಇತರ ಯೋಜನೆಗಳಾದ ಸ್ವಚ್ಛ ಭಾರತ್ ಮಿಷನ್/ಕುಡಿಯುವ ನೀರು ಇತ್ಯಾದಿಗಳೊಂದಿಗೆ ಸಂಯೋಜಿಸುವ ಅಗತ್ಯತೆಯನ್ನು ಅಧ್ಯಯನದಲ್ಲಿ ಒಳಪಡಿಸುವುದು.<br>2. ಪ್ರಕ್ರಿಯೆಯ ಭಾಗದಲ್ಲಿ ಅಗತ್ಯವಿರುವ ಮೌಲ್ಯಮಾಪನ – ಫಲಾನುಭವಿಗಳ ಗುರುತಿಸುವಿಕೆ, ನಿರ್ಮಾಣ ಪ್ರಕ್ರಿಯೆ ಮತ್ತು ತ್ವರಿತ ನಿರ್ಮಾಣಕ್ಕೆ ಅನುಕೂಲವಾಗುವಂತೆ ಸಾಂಸ್ಥಿಕ ವ್ಯವಸ್ಥೆ.<br>3. ಯೋಜನೆಯ ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಸಾಂಸ್ಥಿಕಗೊಳಿಸುವ ಸಾಧ್ಯತೆಗಳು.<br>4. ಎಲ್ಲರಿಗೂ ವಸತಿ ಉದ್ದೇಶವನ್ನು ಪೂರೈಸಲು ಜನರು ಸಾಲವನ್ನು ತೆಗೆದುಕೊಳ್ಳಬಹುದು ಎಂಬುದನ್ನು ಖಚಿತಪಡಿಸಿಕೊಳ್ಳುವುದು ಹೇಗೆ? | |

| | |
|---|---|
| | ಅವರನ್ನು ಸಾಲ ಪಡೆಯುವವರನ್ನಾಗಿ ಮಾಡುವುದು ಹೇಗೆ? ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸುವುದು ಹೇಗೆ? ಯೋಜನೆಯನ್ನು ತ್ವರಿತವಾಗಿ ತೆಗೆದುಕೊಳ್ಳಲು ಗ್ರಾಮೀಣ ಕಾರ್ಯಕ್ರಮದ ಅಡಿಯಲ್ಲಿ ಸಾಲದ ಅಂಶವನ್ನು ಪರಿಶೀಲಿಸಬೇಕಾಗುತ್ತದೆ.<br>5. **ಪ್ರಧಾನ ಮಂತ್ರಿ ಆವಾಸ್ ಯೋಜನೆ**ಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಲ ಪಡೆಯುವವರ ಸಂಖ್ಯೆ ಕಡಿಮೆಯಾಗಲು ಕಾರಣಗಳು. ಸಾಲ ಮಂಜೂರಾತಿ ವಿಳಂಬಕ್ಕೆ ಕಾರಣಗಳು.<br>6. ನಗರ ಪ್ರದೇಶಗಳಲ್ಲಿ ಸರ್ಕಾರವು ಅಪಾರ್ಟ್‌ಮೆಂಟ್ ನಿರ್ಮಿಸಿ ವಸತಿ ರಹಿತರಿಗೆ ನೀಡುತ್ತಿದೆ. ಆದರೆ ಬ್ಯಾಂಕ್‌ಗಳಿಂದ ಸಾಲ ನೀಡುವ ಪ್ರಕ್ರಿಯೆ ವಿಳಂಬವಾಗುತ್ತಿದೆ. ಆದ್ದರಿಂದ, ಬ್ಯಾಂಕ್‌ನಿಂದ ಸಾಲವನ್ನು ತ್ವರಿತವಾಗಿ ಪಡೆಯಲು ಫಲಾನುಭವಿಗಳಿಗೆ ಸರ್ಕಾರದಿಂದ ಅಗತ್ಯವಿರುವ ಬೆಂಬಲದ ಅಗತ್ಯತೆಯ ಬಗ್ಗೆ ಸೇರಿಸಿ.<br>7. ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಪ್ರಾಜೆಕ್ಟ್‌ಗಳ ಸಂಖ್ಯೆ ಮತ್ತು ಆಯ್ಕೆ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವ ಮನೆಗಳ ಸಂಖ್ಯೆಯ ಅಧಿಕಾವಧಿ ಡೇಟಾವನ್ನು ವಿಶ್ಲೇಷಿಸಿ.<br>8. ಗ್ರಾಮೀಣ ಪ್ರದೇಶಗಳಲ್ಲಿ ಫಲಾನುಭವಿ ಆಯ್ಕೆ ಪ್ರಕ್ರಿಯೆಯನ್ನು ಅಧ್ಯಯನ ಮಾಡಲು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಹೇಗೆ ಸುಧಾರಿಸಬಹುದು?<br>9. ಸಾಮಾಜಿಕ ಲೆಕ್ಕ ಪರಿಶೋಧನಾ ದತ್ತಾಂಶದ ಆಧಾರದ ಮೇಲೆ ಆಯ್ಕೆಮಾಡಿದ ಫಲಾನುಭವಿಗಳು ಅಧಿಕೃತ ಅಥವಾ ಇಲ್ಲವೇ ಎಂಬುದನ್ನು ಮೌಲ್ಯಮಾಪನ ಮಾಡಿ<br>10. ರಾಜ್ಯದಲ್ಲಿ ಯೋಜನೆಯ ಅರಿವು ಮತ್ತು ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ಕಡಿಮೆ ತೆಗೆದುಕೊಳ್ಳಲು ಕಾರಣಗಳು. |

| | | |
|---|---|---|
| | 11. ಹಳ್ಳಿಗಳಲ್ಲಿ ನೈಪುಣ್ಯ ಮೇಸ್ತ್ರಿಗಳಂತಹ ಕೆಲಸವನ್ನು ಹೊರಗುತ್ತಿಗೆ ಮಾಡಲು ಸ್ಥಳೀಯ ಜನರನ್ನು ಕೌಶಲ್ಯಗೊಳಿಸುವುದು.<br>12. ಸ್ಥಳೀಯ ಯುವಕರಿಗೆ ನಿರ್ಮಾಣ ಕೌಶಲ್ಯಗಳ ಅಭಿವೃದ್ಧಿಯಲ್ಲಿ ಸಾಮರ್ಥ್ಯ ನಿರ್ಮಾಣ.<br>13. ಯೋಜನೆಯಿಂದ ಪ್ರಯೋಜನ ಪಡೆದ ಶೇಕಡವಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಮಹಿಳಾ ಫಲಾನುಭವಿಗಳು.<br>14. SDG ಗುರಿಗಳು ಮತ್ತು ಕಾರ್ಯಕ್ರಮಕ್ಕೆ ಅದರ ಪ್ರಸ್ತುತತೆಯೊಂದಿಗೆ ಯೋಜನೆಯನ್ನು ಜೋಡಿಸಿ.<br>ಚರ್ಚೆಯ ಸಂದರ್ಭದಲ್ಲಿ ರಾಜೀವ್ ಗಾಂಧಿ ಕಾರ್ಪೊರೇಷನ್‌ನ ಅಧಿಕಾರಿಯು ತಮ್ಮ ಬಳಿ ವಸತಿ ರಹಿತರೆಂದು ಗುರುತಿಸಲ್ಪಟ್ಟ ಸುಮಾರು 17 ಲಕ್ಷ ಕುಟುಂಬಗಳ ದತ್ತಾಂಶವಿದೆ ಎಂದು ಹೇಳಿದರು / ಅಲ್ಲದೆ ಅವರು ಹಿಂದೆ ಆಯ್ಕೆಯಾದ ಫಲಾನುಭವಿಗಳ ಸಾಮಾಜಿಕ ಆಡಿಟ್ ವರದಿಯನ್ನು ಹೊಂದಿದ್ದಾರೆ. ಈ ದತ್ತಾಂಶ ಮತ್ತು ವರದಿಯನ್ನು ಪಡೆದು ಇವುಗಳ ಸಂಶೋಧನೆಗಳು ಮತ್ತು ವಿಶ್ಲೇಷಣೆಯನ್ನು ಅಳವಡಿಸಲು ಮೌಲ್ಯಮಾಪನ ಪ್ರಶ್ನೆಗಳನ್ನು ರೂಪಿಸಬೇಕು ಎಂದು ಅಧ್ಯಕ್ಷರು ನಿರ್ದೇಶಿಸಿದರು. | |
| **ಕಾರ್ಯಸೂಚಿ 8** | **2018-19 ರಿಂದ 2021-22 ರವರೆಗೆ ಕರ್ನಾಟಕದಲ್ಲಿ ಸಮೃದ್ಧಿ ಯೋಜನೆಯ ಮೌಲ್ಯಮಾಪನ** | **ಕರ್ನಾಟಕ ಆದಿಜಾಂಭವ ಅಭಿವೃದ್ಧಿ ನಿಗಮ** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಎಸ್‌ಸಿ/ಎಸ್‌ಟಿ ಯುವಕರು ಯೋಜನೆಯ ಲಾಭ ಪಡೆಯಲು ಏಕೆ ಮುಂದೆ ಬರುತ್ತಿಲ್ಲ? ಕೌಶಲ್ಯ ಮತ್ತು ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಅಂತರವನ್ನು ಕಂಡುಹಿಡಿಯಿರಿ.<br>2. ಪ್ರಯೋಜನಗಳು/ಮಧ್ಯಸ್ಥಿಕೆಗಳು/ಘಟಕಗಳ ಪೂರೈಕೆ-ಬೇಡಿಕೆ ವಿಶ್ಲೇಷಣೆ.<br>3. ಲಾಭದಾಯಕತೆ/ಕಾರ್ಯಸಾಧ್ಯತೆಯನ್ನು ಪರಿಶೀಲಿಸಲು ವ್ಯವಹಾರಗಳ ವೆಚ್ಚ ಲಾಭದ ವಿಶ್ಲೇಷಣೆ. | |

| | | |
|---|---|---|
| | 4. ವ್ಯವಹಾರಗಳ ಯಶಸ್ಸು ಮತ್ತು ವೈಫಲ್ಯ. ಕಾರಣಗಳು? | |
| **ಕಾರ್ಯಸೂಚಿ 9** | **2015–16 ರಿಂದ 2020–21 ರವರೆಗೆ ಕರ್ನಾಟಕದಲ್ಲಿ ಅಳವಡಿಸಲಾಗಿರುವ ಜೈವಿಕ ಅನಿಲ ಸ್ಥಾವರಗಳ ಮೌಲ್ಯಮಾಪನ** | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** |
| ಉಲ್ಲೇಖಿತ ನಿಯಮದಲ್ಲಿ ಅನುಮೋದಿಸಲಾದ ಬದಲಾವಣೆಗಳು | 1. ಜೈವಿಕ ಅನಿಲ ಮೌಲ್ಯಮಾಪನವನ್ನು ಸ್ವಚ್ಛ ಭಾರತ್ ಮಿಷನ್ ಮತ್ತು ಜಲ ಜೀವನ್ ಮಿಷನ್‌ನೊಂದಿಗೆ ವಿಲೀನಗೊಳಿಸಿ ಮತ್ತು ಒಂದೇ ಉಲ್ಲೇಖಿತ ನಿಯಮವನ್ನು ತಯಾರಿಸಿ.<br>2. ಹಳ್ಳಿಗಳಲ್ಲಿ ತ್ಯಾಜ್ಯ ನಿರ್ವಹಣೆಯ ವಿಕೇಂದ್ರೀಕರಣ ಮತ್ತು ಜೈವಿಕ ಅನಿಲ ಸ್ಥಾವರಗಳ ಪಾತ್ರ.<br>3. ಜೈವಿಕ ಅನಿಲ ಸ್ಥಾವರಗಳ ಬಹುಕ್ರಿಯಾತ್ಮಕತೆಯನ್ನು ಕಂಡುಹಿಡಿಯಿರಿ.<br>4. ಜೈವಿಕ ಅನಿಲದ ದುರಸ್ತಿ ಮತ್ತು ನಿರ್ವಹಣೆಗಾಗಿ ನುರಿತ ಕಾರ್ಮಿಕರ ಲಭ್ಯತೆ.<br>5. ಪ್ರಸ್ತುತತೆ, ಕಾರ್ಯಸಾಧ್ಯತೆ, ಸಮರ್ಥನೀಯತೆ ಮತ್ತು ಸಾಮಾಜಿಕ ಪ್ರಯೋಜನದ ಆಧಾರದ ಮೇಲೆ ಶಿಫಾರಸುಗಳನ್ನು ಸೂಚಿಸಿ.<br>6. ಜೈವಿಕ ಅನಿಲ ಸ್ಥಾವರಗಳ ಕೆಲಸದ ಸ್ಥಿತಿ, ಮತ್ತು ಕಾರ್ಯನಿರ್ವಹಿಸದ ಜೈವಿಕ ಅನಿಲ ಘಟಕಗಳ ಸಂದರ್ಭದಲ್ಲಿ, ಜೈವಿಕ ಅನಿಲ ಘಟಕಗಳನ್ನು ಪುನರುಜ್ಜೀವನಗೊಳಿಸಲು ಉತ್ತಮ ಸಮರ್ಥನೀಯ ಮತ್ತು ಅಳವಡಿಸಿಕೊಳ್ಳಬಹುದಾದ ಕ್ರಮಗಳನ್ನು ಸೂಚಿಸಿ.<br>7. ಘನತ್ಯಾಜ್ಯ ನಿರ್ವಹಣೆಯನ್ನು ಮನೆ ಮಟ್ಟದಲ್ಲಿ/ಮೂಲದಲ್ಲಿ ಪ್ರತ್ಯೇಕಿಸುವುದನ್ನು ಅಧ್ಯಯನ ಮಾಡುವುದು ಸಹ ಮುಖ್ಯವಾಗಿದೆ.<br>8. ಯೋಜನೆಯ ಅರಿವು.<br>9. ಮಾದರಿಯು, ಪ್ರಕಾರಗಳು ಮತ್ತು ಪ್ರದೇಶಗಳ ಮೇರೆಗೆ ಕ್ರಿಯಾತ್ಮಕ ಮತ್ತು ಕ್ರಿಯಾತ್ಮಕವಲ್ಲದ ಘಟಕಗಳನ್ನು ಒಳಗೊಂಡಿರಬೇಕು | |

ಎಲ್ಲಾ 9 ಉಲ್ಲೇಖಿತ ನಿಯಮಗಳಿಗೆಗಳಿಗೆ ಅನ್ವಯವಾಗುವ ಸಾಮಾನ್ಯ ಸಲಹೆಗಳು: (ಎ) ಎಲ್ಲಾ ಮೌಲ್ಯಮಾಪನ ಪ್ರಶ್ನೆಗಳು ಗುಣಾತ್ಮಕ ಬದಲಾವಣೆಗಳ ಮೂಲಕ ಗರಿಷ್ಠ ಫಲಿತಾಂಶಗಳನ್ನು ಸಾಧಿಸಲು ಸರಿಯಾದ ಅನುದಾನ ಪ್ರಸ್ತಾವನೆಗಳಿಗೆ ಕಾರಣವಾಗಬೇಕು; (ಬಿ) ಪ್ರಾತಿನಿಧಿಕ ಮಾದರಿಯನ್ನು ಖಾತ್ರಿಪಡಿಸಿಕೊಳ್ಳಲು ಸಾಧ್ಯವಿರುವ ಮಟ್ಟಿಗೆ ಮಾದರಿ ಗಾತ್ರವನ್ನು ಕಡಿಮೆ ಮಾಡಿ; (ಸಿ) ಎಸ್‌ಡಿಜಿ ಸೂಚಕಗಳಿಗೆ ಮೌಲ್ಯಮಾಪನ ಉದ್ದೇಶಗಳನ್ನು ಲಿಂಕ್ ಮಾಡುವುದು; (ಡಿ) ಅಂತಾರಾಷ್ಟ್ರೀಯ ಅನುಭವಗಳು ಮತ್ತು ಕರ್ನಾಟಕದ ಸಂದರ್ಭಕ್ಕೆ ಅದರ ಅನುಷ್ಠಾನ ಸೇರಿದಂತೆ ರಾಜ್ಯದ ಒಳಗೆ ಮತ್ತು ಹೊರಗೆ ಅನುಸರಿಸಿದ ಉತ್ತಮ ಅಭ್ಯಾಸಗಳನ್ನು ಸೇರಿಸಿ; (ಇ) ಕೇವಲ ರಾಜ್ಯ ಮತ್ತು ಕೇಂದ್ರದ ಯೋಜನೆಗಳಲ್ಲದೇ, ಯೋಜನೆಗಳ ನಡುವೆ ರಾಜ್ಯದೊಳಗೆ ಯೋಜನೆಗಳನ್ನು ಸಮನ್ವಯಗೊಳಿಸುವತ್ತ ಗಮನಹರಿಸುವುದು; (ಎಫ್) ವಿವಿಧ ಯೋಜಿತ ಅವಧಿಗಳಲ್ಲಿ ಹಿಂದಿನ ಅಧ್ಯಯನಗಳಲ್ಲಿ ಗುರುತಿಸಲಾದ ಶಿಫಾರಸುಗಳು/ಅಂತರಗಳು/ಸಮಸ್ಯೆಗಳು/ಸವಾಲುಗಳನ್ನು ಯೋಜನೆಯ ಪರಿಣಾಮಕಾರಿತ್ವವನ್ನು ಸುಧಾರಿಸಲು ನಂತರ ಕಾಳಜಿ ವಹಿಸಲಾಗಿದೆಯೇ ಎಂಬುದನ್ನು ವಿಶ್ಲೇಷಿಸಿ.

ಎಲ್ಲಾ ಒಂಬತ್ತು ಉಲ್ಲೇಖಿತ ನಿಯಮಗಳನ್ನು ಸಲಹೆಗಳನ್ನು ಅಳವಡಿಸುವುದಕ್ಕೆ ಒಳಪಟ್ಟು ಅನುಮೋದಿಸಲಾಗಿದೆ.

ಅಧ್ಯಕ್ಷರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**(ಬ್ರಿಜೇಶ್ ಕುಮಾರ್ ದೀಕ್ಷಿತ್, ಭಾ.ಅ.ಸೇ)**
ತಾಂತ್ರಿಕ ಸಮಿತಿಯ ಸದಸ್ಯ ಕಾರ್ಯದರ್ಶಿ
ಮತ್ತು ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

**(ಡಾ. ಶಾಲಿನಿ ರಜನೀಶ್, ಭಾ.ಆ.ಸೇ)**
ಕೆ.ಇ.ಎ ಯ ತಾಂತ್ರಿಕ ಸಮಿತಿಯ ಅಧ್ಯಕ್ಷರು,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ